**<u>ಸಾಕ್ಷಿಯನ್ನು ದಿನಾಂಕ 29-04-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**.

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಎ.ಎನ್.ಟಿ ವಕೀಲರಿಂದಃ</u>**

1. ಈ ದಾವೆಯನ್ನು ಯಾವ ಆಸ್ತಿ ಸಂಬಂಧ ದಾಖಲಿಸಿದ್ದಾರೆ ಗೊತ್ತೇ ಎಂಬ ಪ್ರಶ್ನೆಗೆ ಸಾಕ್ಷಿ ಸರ್ವೆ ನಂಬರ್ 19/4 ರಲ್ಲಿರುವ 17 ಗುಂಟೆ ಆಸ್ತಿಗೆ ಸಂಬಂಧಪಟ್ಟಂತೆ ದಾಖಲಿಸಿದ್ದಾರೆ ಎನ್ನುತ್ತಾರೆ. ಸದರಿ ಆಸ್ತಿಯ ಪಹಣಿ ನೋಡಿದ್ದೇನೆ. ಪಹಣಿಯಲ್ಲಿ 17 ಗುಂಟೆ ಆಸ್ತಿ ವಾದಿಯ ಹೆಸರಿಗೆ ಇದೆ. 17 ಗುಂಟೆ ಪೈಕಿ ಎಷ್ಟು ಖರಾಬು ಜಾಗ ಇದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ ಎಷ್ಟು ಗುಂಟೆ ಒತ್ತುವರಿಯಾಗಿದೆ ಎಂದು ವಾದಿ ಈ ದಾವೆಯಲ್ಲಿ ಹೇಳಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ನಾನು ಯಾವುದೇ ಸರ್ವೆ ದಾಖಲೆಗಳಿಗೆ ಸಹಿ ಮಾಡಿಲ್ಲ.

2. ಮೂಲ ಸರ್ವೆ ನಂಬರ್ 19 ರಲ್ಲಿ ಒಟ್ಟಾರೆ 2 ಎಕರೆ 20 ಗುಂಟೆ ಜಮೀನು ಇದೆ. ಸದರಿ ಸರ್ವೆ ನಂಬರ್ ನಲ್ಲಿ ಎಷ್ಟು ಬ್ಲಾಕ್ ನಂಬರ್ ಇದೆ ಎನ್ನುವುದು ನನಗೆ ಗೊತ್ತಿಲ್ಲ. 4 ನೇ ಬ್ಲಾಕ್ ನಲ್ಲಿ ವಾದಿಗೆ ಜಮೀನು ಇದೆ ಎಂಬುವುದನ್ನು ಹೊರತುಪಡಿಸಿ ನನಗೆ ಬೇರೇನು ಗೊತ್ತಿಲ್ಲ ಎಂದರೆ ಸರಿ. ಪ್ರತಿವಾದಿಯರ ಜಾಗ ಸರ್ವೆ ನಂಬರ್ 19 ರಲ್ಲೇ ಇದೆ. ಅವರ ಜಾಗದ ಬ್ಲಾಕ್ ನಂಬರ್ ನನಗೆ ಗೊತ್ತಿಲ್ಲ. ಸಾಕ್ಷಿ ಪುನಃ ಪ್ರತಿವಾದಿಯರಿಗೆ ನಿವೇಶನ ಇದೆ ಎನ್ನುತ್ತಾರೆ. ಸದರಿ ನಿವೇಶನಗಳನ್ನು ಮಂಡಲ ಪಂಚಾಯತಿಯವರು ಕೊಟ್ಟಿದ್ದಾರೆ. ಪ್ರತಿವಾದಿಯರಿಗೆ

ಕೊಟ್ಟಿರುವ 5 ಹಕ್ಕು ಪತ್ರಗಳನ್ನು ನಾನು ನೋಡಿದ್ದೇನೆ. ಹಕ್ಕು ಪತ್ರಗಳನ್ನು ನೂರಾರು ವರ್ಷಗಳ ಹಿಂದೆ ಕೊಡಲಾಗಿದೆ. ನೂರಾರು ವರ್ಷಗಳಿಂದ ಪ್ರತಿವಾದಿಯರು ಅವರ ಜಾಗದಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ತೋರಿಸುವ ದಾಖಲೆಗಳನ್ನು ನಾನು ನೋಡಿಲ್ಲ. ಹಕ್ಕು ಪತ್ರಗಳನ್ನು ಹೊರತುಪಡಿಸಿ ಪ್ರತಿವಾದಿಯರ ಬಳಿ ಯಾವ ದಾಖಲೆ ಇದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿಯರು ತಮ್ಮ ಜಾಗಳನ್ನು ಅಳತೆ ಮಾಡಿಸಿದ್ದಾರೆ. 10–15 ವರ್ಷಗಳ ಹಿಂದೆ ಸದರಿ ಅಳತೆ ಆಗಿತ್ತು. ಆಗ ನಾನು ಹಾಜರಿದ್ದೆ, ಆದರೆ ಅಳತೆ ದಾಖಲೆಗೆ ಸಹಿ ಮಾಡಿಲ್ಲ.

3. ನ್ಯಾಯಾಲಯಕ್ಕೆ ಬರುವ ಮೊದಲು ಈ ದಾವೆಯ ಸಂಬಂಧ ನಾನು ಪ್ರತಿವಾದಿಯರಿಂದ ಮಾಹಿತಿ ಪಡೆದುಕೊಂಡಿದ್ದೇನೆ. ಸರ್ವೆ ನಂಬರ್ 19/4 ರಲ್ಲಿ ನನಗೆ ಸೇರಿದ ಯಾವುದೇ ಆಸ್ತಿ ಇಲ್ಲ ಎಂದರೆ ಸರಿ. ಸದರಿ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು–ಅಧಿಕಾರ ಇಲ್ಲ ಎಂದರೆ ಸರಿ. ಈ ದಾವೆಯನ್ನು ಯಾವ ಉದ್ದೇಶಕ್ಕೆ ಮತ್ತು ಯಾವ ಆಸ್ತಿ ಸಂಬಂಧ ದಾಖಲಿಸಿದ್ದಾರೆ ಎಂಬ ವಿಷಯವನೇ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿ–ಪ್ರತಿವಾದಿಯರಿಗೆ ಸಂಬಂಧಪಟ್ಟ ಆಸ್ತಿಯ ದಾಖಲೆಗಳನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ.

4. ಸಾಮಾನ್ಯವಾಗಿ ಯಾವುದೇ ಸರ್ವೆ ನಂಬರ್ ನಲ್ಲಿ ಖರಾಬು ಜಾಗ ಇದ್ದ ಪಕ್ಷದಲ್ಲಿ ಅದರ ಬಗ್ಗೆ ಪಹಣಿಯಲ್ಲಿ ಮಾಹಿತಿ ಇರುತ್ತದೆ ಎಂದರೆ ಸರಿ. ವಾದಿಯರಿಗೆ ಸೇರಿದ ಸರ್ವೆ ನಂಬರ್ 19/4 ರಲ್ಲಿ 7 ಗುಂಟೆ ಖರಾಬು ಇದೆ ಎಂದರೆ ಸರಿಯಲ್ಲ. ಚಾನಲ್ ಇರುವ ಬಗ್ಗೆ ನಾನು

ದಾಖಲೆ ನೋಡಿದ್ದೇನೆ. ಚಾನಲ್ ಉತ್ತರ ಭಾಗದಲ್ಲಿ ವಾದಿಗೆ ಸೇರಿದ ಯಾವುದೇ ಜಮೀನು ಇಲ್ಲ. ಚಾನಲ್ ನ ದಕ್ಷಿಣಕ್ಕೆ ಆಕೆಯ 10 ಗುಂಟೆ ಜಮೀನು ಇದೆ. ದಕ್ಷಿಣಕ್ಕೆ 10 ಗುಂಟೆ ಇದೆ ಎಂದು ಜಮೀನಿನ ಅಳತೆಯನ್ನು ನಿಖರವಾಗಿ ಯಾವ ಆಧಾರದಲ್ಲಿ ಹೇಳುತ್ತಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಅಂದಾಜಿನಲ್ಲಿ ಹೇಳುತ್ತಿದ್ದೇನೆ ಎನ್ನುತ್ತಾರೆ.

5. ಪ್ರತಿವಾದಿಯರೆಲ್ಲರೂ ಸೇರಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳುವಂತೆ ನನಗೆ ಕೇಳಿಕೊಂಡಿದ್ದಾರೆ. ಅವರ ಮಾತು ಕೇಳಿಕೊಂಡು ಅವರು ಹೇಳಿಕೊಟ್ಟಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**